(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 19-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ –

4. ಚಾಸಾ.4 ಮತ್ತು 15 ರವರು ನಿಮ್ಮ ಚಿಕ್ಕಪ್ಪನ ಮಕ್ಕಳು ಎಂದರೆ ಸರಿ. ಚಾಸಾ.14 ರವರು ನಿಮ್ಮ ಚಿಕ್ಕಪ್ಪ ಎಂದರೆ ಸರಿ. ನೀವು ಹುಟ್ಟಿದಾಗಿನಿಂದ ಚಿಕ್ಕಮಗಳೂರಿನ ವಿಜಯಪುರದಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ಕಬ್ಬಿನಹಳ್ಳಿಯಲ್ಲಿ ನಿಮಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತೋಟ ಇದೆ ಎನ್ನುತ್ತಾರೆ. ನಿಮ್ಮ ತಂದೆ ಮತ್ತು ಚಿಕ್ಕಪ್ಪನ ನಡುವೆ ವಿಭಾಗವಾಗಿ ಹಲವು ವರ್ಷಗಳು ಕಳೆದಿವೆ ಎಂದರೆ ಸರಿ.

5. ಕಾಫಿ ತೋಟಗಳಲ್ಲಿ ಸಾಮಾನ್ಯವಾಗಿ ತಾತ್ಕಾಲಿಕ ಕಾರ್ಮಿಕರು ಮತ್ತು ಖಾಯಂ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತದೆ ಎಂದರೆ ಸರಿ. ಯಾವುದೇ ಅನಾಮಿಕ ವ್ಯಕ್ತಿಗಳನ್ನು ಎಸ್ಟೇಟಿನ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ ಅವರ ಗುರುತಿನ ಚೀಟಿಗಳನ್ನು ಪಡೆದೇ ಸೇರಿಸಿಕೊಳ್ಳಲಾಗುತ್ತದೆ ಎಂದರೆ ಸರಿ.

6. 2021 ನೇ ಇಸವಿಯಲ್ಲಿ ಚಾಸಾ.14 ಮತ್ತು 15 ರವರ

ತೋಟದಲ್ಲಿ ಯಾರೆಲ್ಲಾ ಕೆಲಸ ಮಾಡುತ್ತಿದ್ದರು ಎಂದು ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2021 ನೇ ಇಸವಿ ನವೆಂಬರ್ ತಿಂಗಳಿನಲ್ಲಿ ನೀವು ಸದರಿ ತೋಟಕ್ಕೆ ಭೇಟಿ ನೀಡಿ ಅಲ್ಲಿ ಯಾರೆಲ್ಲಾ ಕೆಲಸ ಮಾಡುತ್ತಿದ್ದರು ಎಂದರೆ ವಿಚಾರಿಸಿಲ್ಲ ಎಂದರೆ ಸರಿ.

7. ನಿಮಗೆ ಮಾಹಿತಿ ಬಂದ ಬಳಿಕ ಕುತೂಹಲದಿಂದಾಗಿ ನೀವು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋಗಿದ್ದೀರಿ ಎಂದರೆ ಸರಿ. ಅಲ್ಲಿ ಪೊಲೀಸರು ನನಗೆ ನೋಟೀಸನ್ನು ಕೊಟ್ಟರು. ಸದರಿ ನೋಟೀಸಿನಲ್ಲಿ ಏನು ಬರೆದಿತ್ತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಅಲ್ಲಿಗೆ ಹೋಗುವವರೆಗೂ ಕೊಲೆಯಾದ ಶೇಷಪ್ಪ ಯಾರು, ಆತ ನೋಡಲು ಯಾವ ರೀತಿ ಇದ್ದನು ಎಂದು ನಿಮಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ನಾವು ಅಲ್ಲಿಗೆ ಹೋದ ಬಳಿಕ ಪೊಲೀಸರು ಹೇಳಿದರು ಎನ್ನುತ್ತಾರೆ. ಮನು ಎಂಬ ವ್ಯಕ್ತಿ ಯಾರು, ಆತ ನೋಡಲಿಕ್ಕೆ ಯಾವ ರೀತಿ ಇದ್ದನು ಎಂದು ನಿಮಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ಹೇಳಿದ್ದರಿಂದ ನೀವು ಮನು ಎಂಬ ಹೆಸರನ್ನು ಹೇಳಿದ್ದೀರಿ ಹೊರತು ನಿಮಗೆ ಆ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

8. ನಿಪಿ.13 ಪಂಚನಾಮೆಯಲ್ಲಿ ಒಟ್ಟು ಎಷ್ಟು ಗಾಯಗಳಿದ್ದವು, ಅದರ ಅಳತೆ ಎಷ್ಟಿತ್ತು ಎಂದು ಬರೆಯಲಾಗಿದೆಯೇ ಎಂದು ನಿಮಗೆ ತಿಳಿದಿತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ಹೇಳಿದ್ದರಿಂದ ನೀವು ಸದರಿ ದಾಖಲೆಗೆ ಸಹಿ ಮಾಡಿದ್ದನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ದಿಃ 19-11-2021 ರಂದು ನಿಮಗೆ, ಚಾಸಾ.4 ಮತ್ತು 6 ರವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಕರೆಯಿಸಿ ನಿಪಿ.12 ರಂತೆ ನೋಟೀಸನ್ನು ಜಾರಿ

ಮಾಡಿದ್ದಾಗಿ, ಅಲ್ಲಿ ನೀವು ಶೇಷಪ್ಪನ ಶವವನ್ನು ನೋಡಿದ್ದಾಗಿ, ಆತನ ತಲೆ ಮತ್ತು ಹೊಟ್ಟೆಯ ಮೇಲೆ ಕಡಿತದಂತಹ ಗಾಯಗಳು ಕಂಡುಬಂದಿದ್ದಾಗಿ, ಆತನನ್ನು ಆರೋಪಿಯೇ ಕೊಲೆ ಮಾಡಿದ್ದಾನೆ ಎಂದು ನೀವು ಅಭಿಪ್ರಾಯ ಪಟ್ಟಿದ್ದಾಗಿ, ಪೊಲೀಸರು ಆತನ ಶವ ತನಿಖೆಯನ್ನು ನಡೆಸಿ ನಿಪಿ.13 ರಂತೆ ಶವ ಪಂಚನಾಮೆಯನ್ನು ಜರುಗಿಸಿದ್ದಾಗಿ, ನಿಪಿ.9 ಮತ್ತು ಪಿ.10 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ